ಸೋರತೊಡಗುತ್ತದೆ. 51ನೆಯ ವಯಸ್ಸಿಗಾಗಲೇ ಒಂದೊಂದಾಗಿ ಹಲ್ಲು ಬೀಳತೊಡಗಿವೆ; 'ಲಕ್ನೋದಲ್ಲಿ ನನ್ನ ಮತ್ತೊಂದು ಹಲ್ಲು ಹೋಗಿದೆ. ಅಂದರೆ ಈಗ ಮೇಲಿನ ದವಡೆ ಖಾಲಿಯಾಗಿ ಕೆಳಗಿನದು ಮಾತ್ರ ಸರಿಯಾಗಿದೆ' ಎಂದು ರಮಾಗೆ ಬರೆಯುತ್ತಾರೆ. ಲೋಹಿಯಾ ಮನಸ್ಥಿತಿಯೂ ಕದಡಿ ಹೋಗುತ್ತದೆ:

'ನನ್ನ ಮನಸ್ಥಿತಿ ಕಳೆದ ಕೆಲವು ತಿಂಗಳುಗಳಿಂದ ಸರಿಯಿಲ್ಲ. ಇತರರೊಡನೆ ಮಾತಾಡುವುದು, ನನ್ನ ಐಡಿಯಾಗಳನ್ನು ತಲುಪಿಸುವುದು ತೀರಾ ಕಷ್ಟವಾಗತೊಡಗಿದೆ. ನಮ್ಮ ಪಕ್ಷದ ಹೊರಗಿರುವವರಿಗೆ ನನ್ನ ಅನಿಸಿಕೆಗಳನ್ನು ತಿಳಿಸಲು ಸಾಧ್ಯವಾಗದಿದ್ದರೆ, ಅದನ್ನು ಅರ್ಥಮಾಡಿಕೊಳ್ಳಬಲ್ಲೆ. ಆದರೆ ನಮ್ಮವರೊಂದಿಗೂ ನನ್ನ ಅನುಭವ ಅದೇ ಆಗಿದೆ. ಇನ್ನೊಬ್ಬನನ್ನು ಸುಧಾರಿಸಲು ಮಾಡುವ ಪ್ರಯತ್ನ ಕಷ್ಟದ್ದು ಮಾತ್ರವಲ್ಲ, ಮೂರ್ಖತನದ್ದೂ ಎನ್ನುವಂತಿದೆ. ಆದರೆ ಆ ಕೆಲಸವನ್ನೇ ನಾನು ಕೈಗೆತ್ತಿಕೊಂಡಿದ್ದೇನೆ.'

ಇಂಥ ದೈಹಿಕ ಸ್ಥಿತಿ ಹಾಗೂ ಮಾನಸಿಕ ತೊಳಲಾಟಗಳಲ್ಲಿದ್ದ ಲೋಹಿಯಾಗೆ ರಾಷ್ಟ್ರದ ಪ್ರಧಾನಮಂತ್ರಿಯ ವಿರುದ್ಧದ ಸ್ಪರ್ಧೆ ಹಾಗೂ ಗ್ವಾಲಿಯರ್‌ನಲ್ಲಿ ಮಹಾರಾಣಿಯ ವಿರುದ್ಧ ಪೌರ ಕಾರ್ಮಿಕ ಮಹಿಳೆ ಸುಖೋರಾಣಿಯವರ ಸ್ಪರ್ಧೆ ಹೊಸ ಚೈತನ್ಯ ಉಕ್ಕಿಸಿತು!

***

ಫೂಲ್‌ಪುರ ಲೋಕಸಭಾ ಕ್ಷೇತ್ರದಲ್ಲಿ ನೆಹರೂ ವಿರುದ್ಧದ ತಮ್ಮ ಸ್ಪರ್ಧೆಗಿಂತ 'ಗ್ವಾಲಿಯರ್‌ನಲ್ಲಿ 'ಸುಖೋರಾಣಿ ವರ್ಸಸ್ ಗ್ವಾಲಿಯರ್ ಮಹಾರಾಣಿ' ಸ್ಪರ್ಧೆಯನ್ನು ಹೆಚ್ಚು ಮುಖ್ಯವಾಗಿ ಪರಿಗಣಿಸುತ್ತೇನೆ' ಎಂದು ಲೋಹಿಯಾ ಹೇಳಿದ್ದರು. ಇದರಲ್ಲಿ ಎರಡು ತಾತ್ವಿಕ ನಿಲುವುಗಳಿದ್ದವು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರವೂ ಅಲ್ಲಲ್ಲಿ ಉಳಿದುಕೊಂಡಿದ್ದ ಅರಸೊತ್ತಿಗೆಯನ್ನು ಲೋಹಿಯಾ ತೀವ್ರವಾಗಿ ವಿರೋಧಿಸಿದ್ದರು. 1948ರಲ್ಲೇ ಮಧ್ಯಪ್ರದೇಶದಲ್ಲಿ ಅರಸೊತ್ತಿಗೆಯ ವಿರುದ್ಧ ಪ್ರತಿಭಟಿಸಿ ಬಂಧನಕ್ಕೂ ಒಳಗಾಗಿದ್ದರು.

ದೇಶಿ ಸಂಸ್ಥಾನಗಳು ರದ್ದಾದರೂ, ರಾಜಮನೆತನದ ಪಳೆಯುಳಿಕೆಗಳು ಪ್ರಜಾಪ್ರಭುತ್ವದಲ್ಲೂ ಗಟ್ಟಿಯಾಗತೊಡಗಿದ್ದನ್ನು ಲೋಹಿಯಾ ವಿರೋಧಿಸುತ್ತಿದ್ದರು. ಅದರ ಜೊತೆಗೆ ಸಾಮಾನ್ಯ ಚುನಾವಣಾ ಕ್ಷೇತ್ರದಿಂದ ದಲಿತ ಅಭ್ಯರ್ಥಿಯನ್ನು ನಿಲ್ಲಿಸುವ ಹೊಸ ಪ್ರಯೋಗಕ್ಕೂ ಸಮಾಜವಾದಿ ಪಕ್ಷ ಮುಂದಾಗಿತ್ತು. ಇದು ಜಾತಿ, ವರ್ಗ ಎರಡರ ಮುಖಾಮುಖಿಯೂ ಆಗಿತ್ತು

ಲೋಹಿಯಾ ಬ್ರಿಟಿಷ್ ಆಡಳಿತದಲ್ಲಿ ಸಂಯುಕ್ತ ವಿಧಾನಸಭೆಗೆ ಸೇರುವಂತೆ ಬಂದ ಪ್ರಸ್ತಾಪಗಳನ್ನು ತಳ್ಳಿ ಹಾಕಿದ್ದರು. ಕಾರಣ, ಅಲ್ಲಿ ಸದಸ್ಯರಾಗುವವರು ಬ್ರಿಟಿಷ್ ಸಾರ್ವಭೌಮತ್ವಕ್ಕೆ ತಮ್ಮ ನಿಷ್ಠೆಯನ್ನು ಘೋಷಿಸಬೇಕಾಗಿತ್ತು. ಇದು ತಮ್ಮ ಮನಸ್ಸಾಕ್ಷಿಗೆ ವಿರುದ್ಧವಾದುದರಿಂದ ಲೋಹಿಯಾ ಈ ಸದಸ್ಯತ್ವವನ್ನು ಒಪ್ಪಲಿಲ್ಲ.

1952ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಲೋಹಿಯಾ ಸ್ಪರ್ಧಿಸಿರಲಿಲ್ಲ; ಪಕ್ಷದ ಪರವಾಗಿ ದೇಶಾದ್ಯಂತ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದರು. 1957ರ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದ ಚಾಕಿಯ ಚಂದೌಲಿ ಕ್ಷೇತ್ರದಲ್ಲಿ ಸೋತಿದ್ದರು. ಇಷ್ಟಾದರೂ ಲೋಹಿಯಾ 1962ರ ಮೂರನೇ ಮಹಾ ಚುನಾವಣೆಯಲ್ಲಿ 'ಸುರಕ್ಷಿತ' ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲಿಲ್ಲ. ಭಾರತದಲ್ಲಿ ವ್ಯಕ್ತಿಪೂಜೆಯ ಅಪಾಯ ಕುರಿತು ಜನರಿಗೆ ಹೇಳಲು ಹಾಗೂ ವ್ಯಕ್ತಿಪೂಜೆಯನ್ನು ವಿರೋಧಿಸಲು ನೆಹರೂ ವಿರುದ್ಧ ಫೂಲ್‌ಪುರದಲ್ಲಿ ಚುನಾವಣೆಗೆ ನಿಂತಿದ್ದರು.

ಲೋಹಿಯಾ ನೆಹರೂರ ನಿಷ್ಠುರ ಟೀಕಾಕಾರರಾಗಿದ್ದರೂ ಅವರಿಬ್ಬರ ಸಂಬಂಧ ಸಂಕೀರ್ಣವಾದುದಾಗಿತ್ತು. ತರುಣ ಲೋಹಿಯಾ ಕಲ್ಕತ್ತಾದಲ್ಲಿದ್ದಾಗ ನೆಹರೂರನ್ನು 'ಯುವಕರ ಹೃದಯ ಸಾಮ್ರಾಟ' ಎಂದು ಬಣ್ಣಿಸಿದ್ದರು. ಕೆಲ ವರ್ಷ ನೆಹರುವನ್ನು ಗುರುವಿನಂತೆಯೂ ಕಂಡಿದ್ದರು. ಫೂಲ್‌ಪುರದಲ್ಲಿ ಚುನಾವಣೆಗೆ ನಿಲ್ಲುವ ಮುನ್ನ ಲೋಹಿಯಾ ನೆಹರೂಗೆ ಪತ್ರ ಬರೆದರು. ಈ ಪತ್ರ ಹಿಂದೊಮ್ಮೆ ನೆಹರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಲೋಹಿಯಾ ಬರೆಯುತ್ತಿದ್ದ ಪತ್ರದಂತೆಯೇ ಶುರುವಾಗಿತ್ತು:

ಡಿಯರ್ ಪ್ರೆಸಿಡೆಂಟ್,

ಈ ಪತ್ರ ನೋಡಿ ನಿಮಗೆ ಅಚ್ಚರಿಯಾಗಬಹುದು, ನಾನು ಕೊನೆಯ ಬಾರಿಗೆ ಕಾಂಗ್ರೆಸ್ ಕಮಿಟಿಯ ಪಕ್ಷದ ಕಚೇರಿ ಬಿಟ್ಟಾಗ, ನಾನು ಆ ಕಟ್ಟಡಕ್ಕೆ ನನ್ನ ಗೌರವ ಸೂಚಿಸಿ ನಮಸ್ಕರಿಸಿ ಬಂದಿದ್ದೆ. ಅರುಣ ಅಸಫ್ ಅಲಿ ಆಗ ನನ್ನೊಡನಿದ್ದರು. ಅದೇ ನಮ್ಮ ಕೊನೆಯ ಭೇಟಿ. ಈ ಚುನಾವಣೆಗಳಲ್ಲಿ ನಿಮ್ಮ ಗೆಲುವು ನಿಶ್ಚಿತ. ಆದರೆ ಈ 'ನಿಶ್ಚಿತತೆ' 'ಅನಿಶ್ಚಿತತೆ'ಯಾಗುವುದಾದರೆ, ಅದರಿಂದ ಅಂತಿಮವಾಗಿ ನೀವು ಸೋಲುವಂತಾದರೆ ನನಗೆ ಅತ್ಯಂತ ಆನಂದವಾಗುತ್ತದೆ; ಅದರಿಂದ ದೇಶಕ್ಕೂ ಒಳ್ಳೆಯದಾಗುತ್ತದೆ. ಆಗ ನಿಮಗೆ ಇನ್ನಷ್ಟು ಉತ್ತಮವಾಗುವ ಹಾಗೂ ಒಳ್ಳೆಯ ಮನುಷ್ಯನಾಗುವ ಅವಕಾಶ ಸಿಗುತ್ತದೆ. ಕೊನೆಯದಾಗಿ, ನಾನು ನಿಮಗೆ ದೀರ್ಘಾಯುಷ್ಯ ದೊರೆಯಲಿ ಎಂದು ಪ್ರಾರ್ಥಿಸುತ್ತೇನೆ; ಆಗ ನಿಮ್ಮನ್ನು ಸುಧಾರಣೆ ಮಾಡಿ, 1947ಕ್ಕಿಂತ ಮುಂಚಿನ ವ್ಯಕ್ತಿಯನ್ನಾಗಿ ಮಾಡಲು ನನಗೊಂದು ಅವಕಾಶ ಸಿಕ್ಕಬಹುದು.

ನಿಮ್ಮ ನಂಬುಗೆಯ
ರಾಮ್‌ಮನೋಹರ್

ಈ ಪತ್ರಕ್ಕೆ ನೆಹರು ಬರೆದ ಉತ್ತರ:

ಡಿಯರ್ ರಾಮ್‌ಮನೋಹರ್,

ತಾರೀಕು, ವಿಳಾಸ ಎರಡೂ ಇಲ್ಲದ ನಿಮ್ಮ ಪತ್ರ ತಲುಪಿದೆ. ನನ್ನ ಈ ಮಾರೋಲೆಯನ್ನು ಅಲಹಾಬಾದಿನ ಸೋಷಲಿಸ್ಟ್ ಪಾರ್ಟಿಯ ವಿಳಾಸಕ್ಕೆ ಕಳಿಸುತ್ತಿದ್ದೇನೆ.

ನಿಮ್ಮಂತ ಪ್ರಬುದ್ಧ ವ್ಯಕ್ತಿ ಚುನಾವಣೆಯಲ್ಲಿ ನನ್ನನ್ನು ಎದುರಿಸುತ್ತಿರುವುದು ನನಗೆ ಸಂತೋಷ ತಂದಿದೆ. ಈ ಚುನಾವಣೆ ರಾಜಕೀಯ ಕಾರ್ಯಕ್ರಮಗಳ ಸುತ್ತ ಕೇಂದ್ರೀಕೃತವಾಗಿರುತ್ತದೆ ಎಂದುಕೊಂಡಿದ್ದೇನೆ. ಜಾಗರೂಕರಾಗಿರಿ ಹಾಗೂ ವೈಯಕ್ತಿಕ ವಿಷಯಗಳನ್ನು ಚರ್ಚಿಸದಂತೆ ನೋಡಿಕೊಳ್ಳಿ. ನನ್ನ ಮಟ್ಟಿಗೆ ಹೇಳುವುದಾದರೆ, ನಾನು ನನ್ನ ಚುನಾವಣಾ ಕ್ಷೇತ್ರಕ್ಕೆ ಒಂದು ದಿನ ಕೂಡ ಭೇಟಿ ಕೊಡುವುದಿಲ್ಲ ಎಂದು ಮಾತು ಕೊಡುತ್ತೇನೆ.

ನಿಮ್ಮ
ಜವಾಹರಲಾಲ್ ನೆಹರು

ಹಿಂದಿನ ಎರಡು ಸಾರ್ವತ್ರಿಕ ಚುನಾವಣೆಗಳಲ್ಲಿ ನೆಹರು ವಿರುದ್ಧ ದೊಡ್ಡ ನಾಯಕರಾರೂ ಸ್ಪರ್ಧಿಸಿರಲಿಲ್ಲ. ಲೋಹಿಯಾ ಫೂಲ್‌ಪುರ ಕ್ಷೇತ್ರದಲ್ಲಿ ಚುನಾವಣೆಗೆ ನಿಲ್ಲದಂತೆ ಕೆಲವು ವಲಯಗಳಿಂದ ಒತ್ತಡಗಳು ಕೂಡ ಬಂದವು. ಪ್ರಜಾ ಸೋಷಲಿಸ್ಟ್ ಪಾರ್ಟಿಯ ಅಶೋಕ್ ಮೆಹತಾ, 'ಎಲ್ಲರ ಗೌರವದ ಪ್ರತೀಕವಾಗಿರುವ ನೆಹರು ವಿರುದ್ಧ ಪ್ರಜಾ ಸೋಷಲಿಸ್ಟ್ ಪಕ್ಷ ಅಭ್ಯರ್ಥಿಯನ್ನು ನಿಲ್ಲಿಸುವುದಿಲ್ಲ' ಎಂದು ಘೋಷಿಸಿದ್ದರು. ನೆಹರು ಅವರ ಚುನಾವಣಾ ಬದುಕಿನಲ್ಲಿ ಲೋಹಿಯಾ ಥರದ ಧೀಮಂತ ನಾಯಕರೊಬ್ಬರು ಮೊದಲ ಬಾರಿಗೆ ಎದುರಾಗಿದ್ದರು. ತಾನೇಕೆ ಈ ಚುನಾವಣೆಯಲ್ಲಿ ಸ್ಪರ್ಧಿಸಲೇಬೇಕಾಗಿದೆ ಎಂಬುದನ್ನು ಲೋಹಿಯಾ ವಿವರಿಸಿದರು:

'ಗಾಂಧೀಯುಗ ಸರಳತೆ, ಬದ್ಧತೆ ಹಾಗೂ ತ್ಯಾಗಗಳ ಯುಗವಾಗಿತ್ತು; ಆದರೆ ನೆಹರುಯುಗ ವೈಭವ, ಡೌಲು, ಪ್ರದರ್ಶನ, ಫ್ಯಾಶನ್ ಹಾಗೂ ವ್ಯರ್ಥವಾಗಿ ಹಣ ವೆಚ್ಚ ಮಾಡುವ ಯುಗವಾಗಿದೆ. ಭಾರತ ಗೆಲ್ಲಬೇಕೆಂದರೆ ಪ್ರಧಾನಮಂತ್ರಿಯನ್ನು ಸೋಲಿಸುವುದು ಅನಿವಾರ್ಯವಾಗಿದೆ.'

ನೆಹರುಯುಗದ ವಿರೋಧಾಭಾಸಗಳು, ಆ ಕಾಲದ ರಾಜಕಾರಣಿಗಳ ಬೂಟಾಟಿಕೆಗಳು ಲೋಹಿಯಾರನ್ನು ರೇಗಿಸುತ್ತಿದ್ದವು. ನೆಹರೂಗೆ ಮನವಿ ಪತ್ರ ಕೊಡಲು ಹೋದ ಸಮಾಜವಾದಿಗಳನ್ನು ಪೊಲೀಸರು ಬಂಧಿಸುವುದು, ಲಾಠಿ ಚಾರ್ಜ್ ಮಾಡುವುದು ಇವೆಲ್ಲವೂ ಲೋಹಿಯಾರನ್ನು ಕೆರಳಿಸಿದ್ದವು. ಜೈಲುಗಳು ಅಮಾನವೀಯವಾಗಿದ್ದವು. ಕೋರ್ಟುಗಳು ಅಧಿಕಾರಸ್ಥರ, ಪೊಲೀಸರ ತಾಳಕ್ಕೆ ತಕ್ಕಂತೆ ಕುಣಿದು ಸತ್ಯಾಗ್ರಹಿಗಳನ್ನು ಅಪರಾಧಿಗಳಂತೆ ಕಾಣತೊಡಗಿದ್ದವು. ಸತ್ಯಾಗ್ರಹ ಪರಮಮೌಲ್ಯವಾಗಿದ್ದ ಗಾಂಧೀ ಭಾರತದಲ್ಲಿ ಬೆಳೆದಿದ್ದ ಲೋಹಿಯಾಗೆ, ಹಿಂಸೆಯ ಎಳೆಯೂ ಇಲ್ಲದ ಸತ್ಯಾಗ್ರಹಿಗಳನ್ನು ಬಂಧಿಸುವ ನೆಹರು ಭಾರತ ಕ್ರೂರವಾಗಿ ಕಂಡಿತು.

ಗಾಂಧೀ ನಿಕಷದಿಂದ ನೆಹರುವನ್ನು ಅಳೆಯುವ ಲೋಹಿಯಾ ಮಾದರಿ ಅಷ್ಟೊತ್ತಿಗಾಗಲೇ ಭಾರತದಾದ್ಯಂತ ನಿಷ್ಠುರ ಆಧುನಿಕ ಮನಸ್ಸುಗಳನ್ನು ಸೆಳೆದಿತ್ತು. ಲೋಹಿಯಾ ನೆಹರುವನ್ನು ಟೀಕಿಸುತ್ತಿದ್ದ ರೀತಿಯಿಂದಾಗಿ ಅನೇಕ ಲೋಹಿಯಾ ಅನುಯಾಯಿಗಳು ಅಕ್ಷರಶಃ ನೆಹರೂ ವಿರೋಧಿಯಾಗಿದ್ದರು! ಕನ್ನಡ ನವ್ಯ ಲೇಖಕರ ನೆಹರೂ ವಿರೋಧ ಲೋಹಿಯಾರ ಪ್ರಭಾವದಿಂದ